**ಅ.ದಾ. ಸಂಖ್ಯೆ: 253/2022**
**ಪಿ.ಡಬ್ಲ್ಯೂ -01**

**ದಿನಾಂಕ: 02-07-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

**ಪಾಟೀ ಸವಾಲು :-** ಪ್ರತಿವಾದಿಯ ಪರ ಶ್ರೀ. **SGR** . ವಕೀಲರಿಂದ :-

ದಾವೆಯನ್ನು ಯಾವ ಸ್ವತ್ತಿನ ವಿಚಾರವಾಗಿ ಹಾಕಿರುತ್ತೀರಿ ಎಂದರೆ ಸಾಕ್ಷಿ ಖಾನೇಷುಮಾರಿ ನಂ.103 ಎಂದು ನುಡಿಯುತ್ತಾರೆ. ಸರ್ವೆ ನಂಬರ್ ಸ್ವತ್ತಿಗೆ ದಾವೆ ಹಾಕಿರುತತ್ತೀರೋ ಇಲ್ಲವೋ ಎಂದರೆ ಸಾಕ್ಷಿ ಹಾಕಿರುತ್ತೇವೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ ಏನು ಎಂದರೆ ಸಾಕ್ಷಿ 27/4 ಇರಬಹುದು ನನಗೆ ಸರಿಯಾಗಿ ನೆನಪು ಇರುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.27 ಎಷ್ಟು ಪೋಡಿ ಆಗಿದೆ ಎಂದು ಗೊತ್ತೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.27/4ರಲ್ಲೂ ಎಷ್ಟು ಪೋಡಿ ಆಗಿದೆ ಎಂದು ಗೊತ್ತೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನೀವಾಗಲಿ ನಿಮ್ಮ ತಂದೆಯವರಾಗಲಿ , ತಾತನವರಾಗಲಿ ಹಾಗೂ ನಿಮ್ಮ ತಾಯಿಯವರಾಗಲಿ ಸರ್ವೆ ನಂ.27/4 ಕ್ಕೆ ಸಂಬಂಧಪಟ್ಟಂತೆ ಪೋಡಿ ಏನಾದರೂ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು 2 ಗುಂಟೆಗೆ ಸ್ಕೆಚ್ ಆಗಿದೆ ಎಂದು ನುಡಿಯುತ್ತಾರೆ. ನೀವಾಗಲಿ ನಿಮ್ಮ ತಂದೆಯವರಾಗಲಿ , ತಾತನವರಾಗಲಿ ಹಾಗೂ ನಿಮ್ಮ ತಾಯಿಯವರಾಗಲಿ ದಾವಾಸ್ವತ್ತಿನ ಸರ್ವೆ ನಂ.27/4 ರಲ್ಲಿ ನೀವು ಸ್ವಾಧೀನ ಇರುವುದಕ್ಕೆ ಸಂಬಂಧಪಟ್ಟಂತೆ ಸ್ಕೆಚ್ ಏನಾದರೂ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಯಾವಾಗ ಸರ್ವೆ ಸ್ಕೆಚ್ ಮಾಡಿಸಿರುತ್ತೀರಿ ಎಂದರೆ ಸಾಕ್ಷಿ 2000 ಇಸವಿಯಲ್ಲಿ ಎಂದು ನುಡಿಯುತ್ತಾರೆ. ಸದರಿ ಸ್ಕೆಚ್ ಗೆ ಸಲ್ಲಿಸಿದ ಅರ್ಜಿ , ಯಾರು ಯಾರು ಹಾಜರು ಇದ್ದರು ಎಂಬುದರ ಬಗ್ಗೆ ವರಧಿ ಮತ್ತು ನೋಟೀಸನ್ನು ಯಾರು ಯಾರಿಗೆ ಕೊಟ್ಟಿದ್ದರು ಎಂಬುದರ ಬಗ್ಗೆ ಹಾಗೂ ಸ್ಕೆಚ್ ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುತ್ತೀರಾ ಎಂದರೆ ಸಾಕ್ಷಿ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ.

ಯಾರು ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿಯು ನನ್ನ ತಂದೆಯವರು ಎಂದು ನುಡಿಯುತ್ತಾರೆ. ಸದರಿ ಅರ್ಜಿ ನಂಬರ್ ಗೊತ್ತೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ ದಿನಾಂಕದಲ್ಲಿ ಅಳತೆ ಮಾಡಲು ಬಂದಿದ್ದರು ಎಂದರೆ ಸಾಕ್ಷಿ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಂದೆಯವರು ಮರಣ ಹೊಂದಿ ಎಷ್ಟು ವರ್ಷ ಆಗಿರುತ್ತದೆ ಎಂದರೆ ಸಾಕ್ಷಿ ನನ್ನ ತಂದೆಯವರು ಜೀವಂತ ಇದ್ದಾರೆ ಮರಣ ಹೊಂದಿರುವುದಿಲ್ಲ ಎಂದು ನುಡಿಯುತ್ತಾರೆ. 2000 ನೇ ಇಸವಿಯಲ್ಲಿ ಯಾವುದೇ ಸರ್ವೆ ಮಾಡಿಸಿರುವುದಿಲ್ಲ ಹಾಗೂ ಯಾವುದೆ ಸ್ಕೆಚ್ ಅನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

ಸರ್ವೆ ನಂ.27/4 ರ ಜಮೀನು ನಿಮ್ಮ ತಾತನವರಿಗೆ ನಿಪಿ-2 ರಂತೆ ಆಗಿರುತ್ತದೆ ಎಂದು ಹೇಳಿದ್ದು ಸದರಿ ನಿಪಿ-2ರಲ್ಲಿ ಪೂರ್ವ ಮತ್ತು ಉತ್ತರ ನಾವು ಉಳಿಸಿಕೊಂಡಿರುವ ನಮ್ಮಗಳ ಬಾಬ್ತು ಇದೇ ಸರ್ವೆ ನಂಬರ್ ಜಮೀನು ಎಂದು ಬರೆದಿರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ನಿಪಿ-2 ರಲ್ಲಿ ಪಶ್ಚಿಮ ಮತ್ತು ದಕ್ಷಿಣ ದಿಕ್ಕಿನಲ್ಲಿ ಸರ್ಕಾರಿ ರಸ್ತೆ ಎಂದು ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಚೆಕ್ಕುಬಂಧಿಯಲ್ಲಿ ಪಶ್ಚಿಮಕ್ಕೆ ಗಂಗಪ್ಪ ಮತ್ತು ಸಿದ್ದಬಸವಯ್ಯ ರವರ ಜಮೀನು ಹಾಗೂ ಉತ್ತರಕ್ಕೆ ಸಿದ್ದಲಿಂಗಯ್ಯ ರವರ ಜಮೀನು ಎಂದು ಬರೆಸಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ಪಶ್ಚಿಮಕ್ಕೆ ರಸ್ತೆ ಹಾಗೂ ದಕ್ಷಿಣಕ್ಕೆ ಗಂಗಪ್ಪ ಮತ್ತು ಸಿದ್ದಬಸವಯ್ಯ ರವರ ಜಮೀನು ಮತ್ತು ರಸ್ತೆ ಹಾಗೂ ಈಗ ಮಿಲ್ಕ್ ಡೈರಿ ಬಿಲ್ಡಿಂಗ್ ಇದೆ ಎಂದು ಬರೆಸಿರುತ್ತೀರಿ ಎಂದರೆ ಸಾಕ್ಷಿ ದಕ್ಷಿಣಕ್ಕೆ ಮಿಲ್ಕ್ ಡೈರಿ ಬಿಲ್ಡಿಂಗ್ ಇರುತ್ತದೆ ಆದರೆ ಪಶ್ಚಿಮಕ್ಕೆ ರಸ್ತೆ ಇರುವುದು ತಪ್ಪಾಗಿರುತ್ತದೆ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ನಿಪಿ-19 ರಿಂದ 21ರ ಪೋಟೋ ತೋರಿಸಲಾಗಿ ನೀವು ಹೇಳುವ ದಕ್ಷಿಣ ದಿಕ್ಕಿಗೆ ಇರುವ ಮಿಲ್ಕ್ ಡೈರಿ ಇದೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಈಗ ಸಾಕ್ಷಿಗೆ ಪೋಟೋಗಳನ್ನು ತೋರಿಸಲಾಗಿ ಸದರಿ ಪೋಟೋದಲ್ಲಿ ಕಾಣುವ ಡೈರಿಯಿಂದ ದಕ್ಷಿಣ ದಿಕ್ಕಿಗೆ ಹೋಗುವ ಭಾಗದಲ್ಲಿ ರಸ್ತೆ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ನಕಾಶೆ ದಾರಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ **ಪೋಟೋಗಳನ್ನು ನಿಡಿ-01, ನಿಡಿ-02, ನಿಡಿ-03, ನಿಡಿ-04, ನಿಡಿ-05, ನಿಡಿ-6, ನಿಡಿ-7, ನಿಡಿ-8,**

**ನಿಡಿ-9, ನಿಡಿ-10 ಮತ್ತು ನಿಡಿ-11 ಎಂದು ಗುರು**ತಿಸಲಾಯಿತು. ಈಗ ಸಾಕ್ಷಿಗೆ ನಿಪಿ-19 ರಿಂದ 21ರ ಪೋಟೋ ತೋರಿಸಲಾಗಿ ಸದರಿ ಡೈರಿಯ ಉತ್ತರ ದಿಕ್ಕಿಗೆ ಯಾವುದೇ ಸರ್ಕಾರಿ ರಸ್ತೆ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅಲ್ಲಿ ನಮ್ಮ ಸೈಟ್ ಬರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 27/4ರ ಪಶ್ಚಿಮ ದಿಕ್ಕಿನಲ್ಲಿ ಮಾಗಡಿ-ಸೋಲೂರು ರಸ್ತೆ ಹಾಗೂ ಸದರಿ ಮಿಲ್ಕ್ ಡೈರಿಯ ದಕ್ಷಿಣ ದಿಕ್ಕಿನಲ್ಲಿ ಇರುವ ರಸ್ತೆ ಹೊರತು ಪಡಿಸಿ ಬೇರೆ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸಾಕ್ಷಿ ಕಾಲುದಾರಿ ಇದೆ ಅದರಲ್ಲಿ ಬಿಲ್ಡಿಂಗ್ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕಾಲುದಾರಿಯಲ್ಲಿ ಡೈರಿಯವರು ಬಿಲ್ಡಿಂಗ್ ಕಟ್ಟಿರುತ್ತಾರೆ ಎಂದು ನೀವೇನಾದರೂ ಸರ್ವೆ ಮಾಡಿಸಿ ಸ್ಕೆಚ್ ಪಡೆದಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ನೋಡಿದರೆ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ಸದರಿ ಡೈರಿಯ ದಕ್ಷಿಣ ದಿಕ್ಕಿನಲ್ಲಿ ಇರುವ ರಸ್ತೆಯು ಪುರಾತನ ಕಾಲದಿಂದಲೂ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ರಸ್ತೆಯು ಮಾಗಡಿ-ಸೋಲೂರು ರಸ್ತೆಯಿಂದ ಅಂದರೆ ನೀವು ದಾವಾಸ್ವತ್ತಿನ ಪಶ್ಚಿಮ ದಿಕ್ಕಿಗೆ ತೋರಿಸಿರುವ ರಸ್ತೆಯಿಂದ ಪ್ರಾರಂಭವಾಗಿ ಪೂರ್ವಕ್ಕೆ ಸಿಹಿನೀರು ಬಾವಿತನಕ ಸದರಿ ರಸ್ತೆಯು ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ರಸ್ತೆಯನ್ನು ನಿಪಿ-11 ರಲ್ಲಿ ತೋರಿಸಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ನಿಪಿ-2 ರಂತೆ ನಿಮ್ಮ ತಾತ ಗಂಗಪ್ಪ ಮತ್ತು ಸಿದ್ದಬಸವಯ್ಯ ರವರಿಂದ ಪಶ್ಚಿಮಕ್ಕೂ ಮತ್ತು ದಕ್ಷಿಣಕ್ಕೂ ರಸ್ತೆ ಎಂದು ತೋರಿಸಿರುವ ಜಾಗದ ಕಾರ್ನರ್ ಜಾಗವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಮಾಗಡಿ ಸೋಲೂರು ರಸ್ತೆಯು ಮೊದಲು ಬಂಡಿ ದಾರಿ ಇತ್ತು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ, ಈಗ ಅದನ್ನು ಅಗಲ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ಇರುವ ಮಾಗಡಿ - ಸೋಲೂರು ರಸ್ತೆಯು ಸುಮಾರು 25 ರಿಂದ 30 ಅಡಿ ಇದೆ ಎಂದರೆ ಸಾಕ್ಷಿ 30 ಅಡಿ ಇದೆ ಎಂದು ನುಡಿಯುತ್ತಾರೆ. ಸದರಿ ರಸ್ತೆಯನ್ನು 10-15 ವರ್ಷಗಳ ಹಿಂದೆ ಅಗಲ ಮಾಡಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ರಸ್ತೆಯನ್ನು ಅಗಲ ಮಾಡುವಾಗ ಯಾವುದೇ ಸ್ವಾ ಧೀನ ಪಡಿಸಿಕೊಂಡಿರುವುದಿಲ್ಲ ಏಕಾಏಕಿ ರಸ್ತೆ ಅಗಲ ಮಾಡಿರುತ್ತಾರೆ ಎಂದರೆ

ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ರಸ್ತೆಯ ಪೂರ್ವ ದಿಕ್ಕಿನ ಕಡೆ ಕಾಲೇವು ಆದ ನಂತರ ಪುಟ್ಪಾತ್ ಬರುತ್ತದೆ ಎಂದರೆ ಸಾಕ್ಷಿ 4 ಅಡಿ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ಕಾಲುವೆಯು 3 ಅಡಿ ಅಗಲ ಬರುತ್ತದೆ ಎಂದರೆ ಸಾಕ್ಷಿ 2 ½ ಅಡಿ ಎಂದು ನುಡಿಯುತ್ತಾರೆ. ಸದರಿ ರಸ್ತೆಯನ್ನು ಅಗಲ ಮಾಡುವಾಗ ಪೂರ್ವ ದಿಕ್ಕಿನಲ್ಲಿ 15-20 ಅಡಿ ಅಗಲ ತೆಗೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ತೆಗೆದುಕೊಂಡಿರುತ್ತಾರೆ ಆದರೆ ನಮ್ಮ ಸೈಟಿಗೆ ಯಾವುದೇ ತೊಂದರೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಪಶ್ಚಿಮ ದಿಕ್ಕಿನಲ್ಲಿ ಇರುವ ಮಾಗಡಿ ಮತ್ತು ಸೋಲೂರು ರಸ್ತೆ ಹಾಗೂ ದಕ್ಷಿಣ ದಿಕ್ಕಿನಲ್ಲಿ ಇರುವ ಸರ್ಕಾರಿ ಕಾಲುದಾರಿಯ ಕಾರ್ನರ್ ನಲ್ಲಿ ಸದರಿ ಮಿಲ್ಕ್ ಡೈರಿಯನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

ಸದರಿ ಮಿಲ್ಕ್ ಡೈರಿಯನ್ನು ಕಟ್ಟಿ ಎಷ್ಟು ವರ್ಷ ಆಗಿರುತ್ತದೆ ಎಂದರೆ ಸಾಕ್ಷಿ 26-27 ವರ್ಷ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಮಿಲ್ಕ್ ಡೈರಿಯು ಪೂರ್ವ ಪಶ್ಚಿಮ 55 ಅಡಿ ಉತ್ತರ ದಕ್ಷಿಣ 40 ಅಡಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮಿಲ್ಕ್ ಡೈರಿಯು ಪೂರ್ವ ಪಶ್ಚಿಮ 55 ಅಡಿ ಉತ್ತರ ದಕ್ಷಿಣ 30 ಅಡಿ ಇದೆ ಎಂದು ಮಿಲ್ಕ್ ಡೈರಿಯವರ ಹೆಸರಿಗೆ ಇ-ಖಾತಾ ಆಗಿದೆ ಎಂದರೆ ಸಾಕ್ಷಿ ಇ-ಖಾತಾ ಆಗಿರುವುದು ಗೊತ್ತು ಆದರೆ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮಿಲ್ಕ್ ಡೈರಿ ಹೆಸರಿಗೆ ಎಷ್ಟು ವಿಸ್ತೀರ್ಣದ ಖಾತೆ ಆಗಿದೆ ಎಂದು ದಾಖಲೆಯನ್ನು ಹಾಜರು ಪಡಿಸುತ್ತೀರಾ ಎಂದರೆ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ಸದರಿ ಮಿಲಕ್ ಡೆವರಿಯವರು ಪೂರ್ವ ಪಶ್ಚಿಮ 55 ಅಡಿ ಉತ್ತರ ದಕ್ಷಿಣ 30 ಅಡಿ ಬಿಲ್ಡಿಂಗ್ ಅನ್ನು ನಿರ್ಮಿಸಿ ನಡೆಸಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿಯ ಪರ ವಕೀಲರು ಮುಂದುವರಿದ ವಾಟೀ ಸವಾಲಿಗೆ ಸಮಯ ಕೋರಿದ್ದರಿಂದ ವಾಟೀ ಸವಾಲು ಮುಂದೂಡಲಾಯಿತು.**

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.